


ಬಂದೂಕು ಸಲಾಮು ನೀಡುವ ಮೂಲಕ ನನ್ನನ್ನು ಸ್ವಾಗತಿಸಲಾಯಿತು! ಯಾರಿಗಾದರೂ ವಂದನೆ ಸಲ್ಲಿಸಲು ಬಂದೂಕಿನಂಥ ಆಯುಧ ಯೋಗ್ಯವಾದದ್ದೇ?

ಅದಕ್ಕಾಗಿಯೇ ಚರಕವನ್ನು ನಾವು ಅಹಿಂಸೆಯ ಸಾಧನವನ್ನಾಗಿಸಬೇಕಿದೆ. ಮುಸೊಲಿನಿಯ ಬಂಗಲೆಯ ಗೋಡೆಗೆ ತೂಗುಹಾಕಿರುವ ಬಂದೂಕು ತನ್ನ ನೋಟ ಮಾತ್ರದಿಂದಲೇ ನೋಡುಗರಲ್ಲಿ ಹಿಂಸೆಯ ಅನುಭೂತಿಯನ್ನು ಉಂಟುಮಾಡುತ್ತದೆ. ಆದರೆ ಚರಕ ತನ್ನ ಉಪಸ್ಥಿತಿಯಿಂದಲೇ ಅಹಿಂಸೆಯ ಸಂದೇಶವನ್ನು ಸಾರುವಂತಾಗಬೇಕು.

ನನಗೆ ಗೊತ್ತಿದೆ–ಅಹಿಂಸೆಯ ಮಹತ್ತ್ವವನ್ನು ಜನರಿಗೆ ಮನವರಿಕೆ ಮಾಡಿಕೊಡುವುದು ಬಲು ತ್ರಾಸಿನ ಕೆಲಸ. ನಾವು ಕೂಡ ಅಹಿಂಸೆಯ ಮಹತ್ವದ ಕುರಿತು ಹೆಚ್ಚಿನ ವಿಚಾರ ಮಾಡಬೇಕು. ಈ ವಿಷಯದಲ್ಲಿ ಜಗತ್ತು ನಮ್ಮನ್ನು ಸತ್ವಪರೀಕ್ಷೆಗೆ ಗುರಿಮಾಡಬಹುದು. ಚರಕದ ಪ್ರಚಾರದ ಬಗ್ಗೆ ಭಾಷಣ ಮಾಡಿಕೊಂಡು ಕೂತಿದ್ದಕ್ಕೆ ಜಗತ್ತು ನನ್ನನ್ನು ಗೇಲಿ ಮಾಡಲೂಬಹುದು. ಯಾವಾಗಿನಿಂದಲೋ ಬಡತನ, ಅಸಹಾಯಕತೆ, ಅನ್ಯಾಯ, ದಬ್ಬಾಳಿಕೆಗಳ ಸಂಕೇತವಾಗಿರುವ ಚರಕವನ್ನು ಅಹಿಂಸೆಯ, ಸಮಾನತೆಯ, ನವ ಆರ್ಥಿಕತೆಯ ಸಂಕೇತವನ್ನಾಗಿಸುವ ಹೊಣೆ ಈಗ ನಮ್ಮ ಹೆಗಲ ಮೇಲಿದೆ.

ಚರಕವು ಅಹಿಂಸೆಯ ಸಂಕೇತವಾಗಬೇಕು ಎಂದೆ. ಆದರೆ ಈ ಸಂಕೇತದಿಂದ ಆಗುವ ಅನುಕೂಲಗಳೇನು? ಇದನ್ನು ಹೀಗೆ ನೋಡಬಹುದು: ದೇವರಿದ್ದಾನೋ ಇಲ್ಲವೋ ಎನ್ನುವ ಹಿಂದೂ ಧರ್ಮದ ವಾದ ನಮಗೆಲ್ಲ ಪರಿಚಿತವಾದದ್ದೇ. ದೇವರನ್ನು ನಂಬುವವರು ಅವನನ್ನು ವಿಗ್ರಹದ ಮೂಲಕ ಸಾಂಕೇತಿಕವಾಗಿ ಪೂಜಿಸುತ್ತಾರೆ. ಅಹಿಂಸಾ ತತ್ತ್ವಕ್ಕೂ ಅಂತಹದೊಂದು ಸಾಂಕೇತಿಕವಾದ ಪೂಜನೀಯ ವಸ್ತು ಬೇಕೆಂದಾದರೆ ಅದು ಚರಕವಾಗಬಹುದು. ಎಷ್ಟೆಂದರೂ ಅಹಿಂಸೆಯನ್ನು ಅಮೂರ್ತ ರೂಪದಲ್ಲಿ ನಾವು ಸ್ಮರಣೆಗೆ ತಂದುಕೊಳ್ಳಲಾಗುವುದಿಲ್ಲ. ಹಾಗಾಗಿ ಅದನ್ನು ಚರಕವೆಂಬ ಮೂರ್ತ ರೂಪದಲ್ಲಿ ನಾವು ಕಣ್ಮುಂದೆ ಇರಿಸಿಕೊಳ್ಳಬೇಕಿದೆ. ನೀವು ಈ ತತ್ತ್ವವನ್ನು ನನ್ನಷ್ಟೇ ಶ್ರದ್ಧೆಯಿಂದ ಆಚರಣೆಗೆ ತರುವ ಮನಸ್ಸು ಮಾಡಿರಿ.